# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SECONDARY EDUCATION EXAMINATION BOARD

Malleshwaram, Bengaluru – 560003.

## 2020-21 ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ – 2

**ವಿಷಯ : ದ್ವಿತೀಯ ಭಾಷೆ – ಕನ್ನಡ** | **ವಿಷಯ ಸಂಕೇತ : 33-K**

**ಅವಧಿ : 3 ಗಂಟೆ** | **ಗರಿಷ್ಠ ಅಂಕಗಳು : 80**

**ಶಾಲಾ ಅಭ್ಯರ್ಥಿಗಳಿಗೆ**

---

### ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4 x 1 = 4**

1. ಸವರ್ಣದೀರ್ಘ ಸಂಧಿಗೆ ಉದಾಹರಣೆಯಾದ ಪದವಿದು.

   ಎ. ಒಬ್ಬೊಬ್ಬರು

   ಬಿ. ಮಹಾನುಭಾವ

   ಸಿ. ಬೆಣ್ಣೆಲುಬು

   ಡಿ. ಮರವನ್ನು

2. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ :

   ಎ. 25

   ಬಿ. 13

   ಸಿ. 09

   ಡಿ. 05

3. 'ಇಂದಿನಿಂದ' ಈ ಪದದಲ್ಲಿರುವ ವಿಭಕ್ತಿಯ ಹೆಸರು :

   ಎ. ಪ್ರಥಮ

   ಬಿ. ದ್ವಿತೀಯ

   ಸಿ. ಚತುರ್ಥಿ

   ಡಿ. ತೃತೀಯ

4. 'ಚೆನ್ನಾಗಿ' ಪದವು ಅವ್ಯಯದ ಈ ಗುಂಪಿಗೆ ಸೇರುತ್ತದೆ :

   ಎ. ಸಾಮಾನ್ಯಾವ್ಯಯ

   ಬಿ. ಭಾವಸೂಚಕಾವ್ಯಯ

   ಸಿ. ಅನುಕರಣಾವ್ಯಯ

   ಡಿ. ಕೃದಂತಾವ್ಯಯ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 12 x 1 = 12**

5. ಪ್ರಾಣಿಗಳನ್ನು ಕೊಲ್ಲಲು ಬೇಡನು ಯಾವ ಉಪಾಯವನ್ನು ಮಾಡುತ್ತಿದ್ದನು?

6. ಖಡ್ಗಕ್ಕಿಂತ ಹರಿತವಾದುದು ಯಾವುದು ಎಂದು ಅಸಿ, ಮಸಿ, ಕೃಷಿ ಪಾಠದಲ್ಲಿ ಹೇಳಲಾಗಿದೆ?

7. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?

8. ಹಕ್ಕಿಗಳು ಎಲ್ಲಿ ಆಶ್ರಯ ಪಡೆಯುತ್ತವೆ?

9. ಅಮೇರಿಕಾದ ಗ್ಯಾನಟ್ ಕಡಲ ಹಕ್ಕಿ ಯಾವ ವಸ್ತುಗಳಿಂದ ಗೂಡನ್ನು ಅಲಂಕರಿಸಿತ್ತು?

10. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?

11. ಏಣಿಗೆ ಬೀಳುವ ಭಯವಿಲ್ಲ ಏಕೆ?

12. ಸಿದ್ದಾರ್ಥನು ಕಾಡಿನಿಂದ ನಾಡಿಗೆ ಹೊರಟಿದ್ದು ಏಕೆ?

13. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಸಿ.ಪಿ.ಕೆ. ಯವರು ಹೇಳಿದ್ದಾರೆ?

14. ಅಳಿಯಾಸೆಗಳ ಸುಳಿಗೆ ಸಿಲುಕಿದರೆ ಮನಸ್ಸು ಹೇಗೆ ತೊಳಲುತ್ತದೆ?

15. ಕುಣಿಗಲ್ ಕೆರೆ ಹೇಗೆ ತುಂಬಿದೆ?

16. ಕೆರೆಗಳು ಯಾವಾಗ ನಿಷ್ಪ್ರಯೋಜಕವಾಗುತ್ತವೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8 x 2 = 16**

17. ಸಾಮಾನ್ಯವಾದ ಲೋಕವರ್ತನೆ ಯಾವುದು ಎಂದು ಅ.ರಾ. ಮಿತ್ರರವರು ಹೇಳಿದ್ದಾರೆ?

18. ನಮ್ಮ ದೇಶದ ರಕ್ಷಣಾ ಪಡೆ ಪ್ರಬಲವಾಗಿರಬೇಕು ಏಕೆ?

19. ಬಾಲಕ ಪುಟ್ಟಯ್ಯ ಕಣ್ಣು ಕಳೆದುಕೊಂಡ ಘಟನೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

20. ಬಾಲಕ ಪುಟ್ಟಯ್ಯ ಪಂಚಾಕ್ಷರ ಗವಾಯಿಗಳ ಶಿಷ್ಯನಾದುದು ಹೇಗೆ?

21. ಹಕ್ಕಿಗೂಡಿನಲ್ಲಿ ಕಂಡುಬರುವ ಬದುಕಿನ ಅನುಭವಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

22. ಜನಪದರು ಕುಣಿಗಲ್ ಕೆರೆಯ ಅಂದ ಕಂಡ ಬಗೆಯನ್ನು ಸಂಕ್ಷಿಪ್ತವಾಗಿ ತಿಳಿಸಿ.

23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?

24. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು?

**IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1 x 3 = 3**

25. ಕುಮಾರವ್ಯಾಸ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. 1 x 3 = 3**

26. ಒಂದೊಂದು ಹೆಜ್ಜೆಯ ಭಾರ
ಹೊರುವಾಗ ನಾ
ಪಟ್ಟಪಾಡು ನನಗೇ ಗೊತ್ತು.
ಲೀಲಾಜಾಲವಾಗಿ ಮೇಲೇರಿದ
ಇವರಿಗೆ ಭಾರ ಹೊತ್ತವರ
ಕಾಳಜಿಯೇ ಇಲ್ಲ.
ಆನೆಭಾರ ಹೊತ್ತು ಗಟ್ಟಿ ನೆಲದಲ್ಲಿ ಕಾಲೂರಿನಿಂತ
ನನಗೆ ಬೀಳುವ ಭಯವಿಲ್ಲ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ. ಲಕ್ಷಣ ಬರೆದು ಸಮನ್ವಯಗೊಳಿಸಿ. 1 x 3 = 3**

27. "ಸೀತೆಯ ಮುಖಕಮಲ ಅರಳಿತು".

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1 x 3 = 3**

28. "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು"

ಅಥವಾ

"ಆಳಾಗಿ ದುಡಿ ಅರಸಾಗಿ ಉಣ್ಣು"

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5 x 3 = 15**

29. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ"

30. "ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ."

31. "ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು"

32. "ಸಿಡುಕು ಮಿಡುಕನು ತೊರೆದು ಮೌನಿಯಾಗು"

33. "ವೇದಾಂತವನೋದಿ ಫಲವೇನಯ್ಯಾ"

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

34. ಕೆಸರೊಳಿದ್ದರು ________________

________________

________________

________________ ಸಾರ್ಥಕತೆಗೆ

ಅಥವಾ

ಒಂದು ಬಾಣಕೆ ________________

________________

________________

________________ ಹಗಲಿರುಳು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 x 4 = 4**

35. ಗೋಪಾಲನು ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸ್ವಾರಸ್ಯವನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

ಅಥವಾ

"ನನ್ನ ಗೋಪಾಲ" ಪಾಠದಲ್ಲಿ ಗೋಪಾಲನು ನೋಡಿದ ಪ್ರಕೃತಿಯ ಸೊಗಸನ್ನು ವರ್ಣಿಸಿ ಬರೆಯಿರಿ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1 x 4 = 4 (2 + 2)**

ಕನ್ನಡ ರಂಗಭೂಮಿಗೆ ದಕ್ಷಿಣ ಕನ್ನಡ ಜಿಲ್ಲೆ ನೀಡಿದ ಕೊಡುಗೆಯಲ್ಲಿ ಬಿ.ವಿ. ಕಾರಂತರು ಪ್ರಮುಖರು. ಅವರ ತಂದೆ ನಾರಣಪ್ಪಯ್ಯ ಹಾಗೂ ತಾಯಿ ಲಕ್ಷ್ಮಮ್ಮ. ಆರ್ಥಿಕವಾಗಿ ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ತಾಯಿ ಲಕ್ಷ್ಮಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಜಾತ್ರೆ, ವಾದ್ಯಗಳ ಧ್ವನಿ ಕಾರಂತರಿಗೆ ಸಿಕ್ಕ ಶ್ರೀಮಂತಿಕೆ.

ಎಂಟನೆಯ ತರಗತಿಯ ಓದು ಮುಗಿಸುವ ಹೊತ್ತಿಗೆ ಅವರು ಶಾಲೆಯನ್ನು ಬಿಡಬೇಕಾಗಿ ಬಂತು. ಮನೆಯ ಆರ್ಥಿಕ ಪರಿಸ್ಥಿತಿ ಒಂದು ಕಾರಣವಾದರೆ ಇನ್ನೊಂದು ಅವರ ಜೀವನದ ಘಟನೆ. ಓದಿನ ಆಸಕ್ತಿಯಿದ್ದ ಕಾರಂತರಿಗೆ ಪುಸ್ತಕ ಕೊಳ್ಳಲು ಹಣವಿಲ್ಲವಾದಾಗ ಅವರು ಪಾಠ ಹೇಳುತ್ತಿದ್ದ ಮನೆಯಿಂದ ಹಣ ಕದಿಯುತ್ತಿದ್ದರು. ಕಳ್ಳತನ ಬಯಲಾದಾಗ ಅವರು ಊರು ಬಿಟ್ಟು ಹೋದರು.

ಬಿ.ವಿ. ಕಾರಂತರು ಮೈಸೂರು ತಲುಪುತ್ತಿದ್ದಂತೆ ಗುಬ್ಬಿ ಕಂಪನಿ ಅಲ್ಲಿ ಬಿಡಾರ ಹೂಡಿರುವ ವಿಚಾರ ತಿಳಿಯಿತು. ಕಾರಂತರು ಗುಬ್ಬಿ ಕಂಪನಿ ಪ್ರವೇಶಿಸಿದರು. ಕಂಪನಿ ಸೇರಿದ ಕಾರಂತರು ಓದು, ಸಂಗೀತದ ಆಸಕ್ತಿಯನ್ನು ಕಡಿಮೆ ಮಾಡಿಕೊಳ್ಳಲಿಲ್ಲ. ಬಿಡುವು ಸಿಕ್ಕಾಗಲೆಲ್ಲ ಓದುತ್ತಿದ್ದರು. ಹಾರ್ಮೋನಿಯಂ ನುಡಿಸುವುದನ್ನು ಕಲಿತರು. ನಾಟಕ ಕಲಿಸಲು ಬರುತ್ತಿದ್ದ ಬೆಳ್ಳಾವೆ ನರಹರಿ ಶಾಸ್ತ್ರೀ, ಬಿ. ಪುಟ್ಟಸ್ವಾಮಯ್ಯ ಮುಂತಾದವರ ಬಳಿ ಶಿಷ್ಯವೃತ್ತಿ ಮಾಡಿ ಹಸ್ತಪ್ರತಿ ಮಾಡುವ ಕೆಲಸ ಗಿಟ್ಟಿಸಿಕೊಂಡು ತಮ್ಮ ಕಲಿಕೆಗೆ ದಾರಿ ಮಾಡಿಕೊಂಡರು.

ಬನಾರಸ್ ವಿಶ್ವವಿದ್ಯಾಲಯದಿಂದ ಹಿಂದಿ ಪದವಿ ಪಡೆದು ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಡಿಪ್ಲೊಮಾ ಪದವಿ ಪಡೆದರು. ಕನ್ನಡ ರಂಗಭೂಮಿಯಷ್ಟೇ ಅಲ್ಲದೆ ಭಾರತೀಯ ರಂಗಭೂಮಿಯನ್ನು ಶ್ರೀಮಂತಗೊಳಿಸಿದರು. ಮಕ್ಕಳ ರಂಗಕಲ್ಪನೆ ಮೂಲಕ ಹೊಸ ರಂಗ ಲೋಕವನ್ನು ಚಿಣ್ಣರಿಗಾಗಿ ನಿರ್ವಹಿಸಿದ ಖ್ಯಾತಿ ಪಡೆದ ಇವರಿಗೆ ಪದ್ಮಶ್ರೀ ಪ್ರಶಸ್ತಿ ಹಾಗೂ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳು ಲಭಿಸಿವೆ.

36. ಪ್ರಶ್ನೆಗಳು

ಅ) ವಿದ್ಯಾರ್ಥಿಯಾಗಿದ್ದಾಗ ಕಾರಂತರು ಊರು ಬಿಟ್ಟು ಹೋಗಲು ಕಾರಣವೇನು?

ಬ) ಬಿ.ವಿ. ಕಾರಂತರು ಬಿಡುವಿನ ವೇಳೆಯನ್ನು ಕಲಿಕೆಗೆ ಹೇಗೆ ಸದುಪಯೋಗ ಪಡಿಸಿಕೊಂಡರು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1 x 4 = 4**

37. 'ಸಾಂಕ್ರಾಮಿಕ ರೋಗ ತಡೆಗಟ್ಟುವ ಬಗೆ'

ಅಥವಾ

'ನನ್ನ ಮೆಚ್ಚಿನ ಪ್ರವಾಸಿ ತಾಣ'

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5 = 5**

38. ನಿಮ್ಮನ್ನು ಅರಸೀಕೆರೆಯ ಸರ್ಕಾರಿ ಪ್ರೌಢಶಾಲೆಯ 'ರಾಜು' ಎಂದು ಭಾವಿಸಿಕೊಂಡು ಶಾಲಾ ಕೈ ತೋಟಕ್ಕೆ ಉಚಿತವಾಗಿ ಗಿಡಗಳನ್ನು ಸರಬರಾಜು ಮಾಡುವಂತೆ ಕೋರಿ ತಾಲ್ಲೂಕಿನ ತೋಟಗಾರಿಕಾ ಇಲಾಖೆಯ ಅಧಿಕಾರಿಯವರಿಗೆ ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಚಿಂತಾಮಣಿಯಲ್ಲಿ ವಾಸವಿರುವ 'ಸೀಮಾ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ಏರ್ಪಡಿಸಿದ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ವಿವರಿಸಿ ಗೌರಿಬಿದನೂರಿನಲ್ಲಿ ವಾಸಿಸುವ 'ಕಲಾವತಿ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.